ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 07-10-2022 ರಂದು ಹಗದೂರು ವಾರ್ಡ್ ಸಂಖ್ಯೆ:111 (ಹಳೆ ನಂ.84)ರ ವಾರ್ಡ್ ಕಮಿಟಿ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ಶ್ರೀ.ಬಸವರಾಜ್.ಕೆ.ಟಕ್ಕಳಕಿ, ಸಹಾಯಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ**

1. ಶ್ರೀ.ಬಸವರಾಜ್.ಕೆ.ಟಕ್ಕಳಕಿ, ಸಹಾಯಕ ಅಭಿಯಂತರರು, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ರವಿಚಂದ್ರ, ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಭಾಗ
3. ಶ್ರೀ.ನಚಿಕೇತ, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ ವಿಭಾಗ, ಬಿಬಿಎಂಪಿ
4. ಶ್ರೀ.ಪ್ರಕಾಶ್, ಹಿರಿಯ ಆರೋಗ್ಯ ನಿರೀಕ್ಷಕರರು ಶ್ರೀ.ಸೋಮಶೇಖರ್ ಕಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ
5. ಡಾ|| ಸನಾ, ವೈಧ್ಯಾಧಿಕಾರಿಗಳು ಇಮ್ಮಡಿಹಳ್ಳಿ ಆರೋಗ್ಯ ಕೇಂದ್ರ
6. ಶ್ರೀ.ಸುಧಾಕರರ್ ಮತ್ತು ಶ್ರೀ.ಶಿವಕುಮಾರ್, ಆರೋಗ್ಯ ಸಹಾಯಕರು, ಆರೋಗ್ಯ ಕೇಂದ್ರ
7. ಹಗದೂರು ವಾರ್ಡಿನ ಶಕ್ತಿ ಕೇಂದ್ರದವರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ದಿ ಸಂಘದವರು ಮತ್ತು ಸಾರ್ವಜನಿಕರು

***ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.***

**ಅ) ಬಿ.ಬಿ.ಎಂ.ಪಿ -ವಾರ್ಡ್ ಮಟ್ಟದ ಸಮಸ್ಯೆಗಳ ಚರ್ಚೆ.**

1. ಇಮ್ಮಡಿಹಳ್ಳಿ ಗ್ರಾಮದ ರಾಮಸ್ವಾಮಿ ಮನೆ ಹತ್ತಿರ ಇರುವ ಕೊಳವೆ ಬಾವಿಗೆ ಪಂಪ್-ಮೋಟಾರ್ ಅಳವಡಿಸುವುದು.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಪಂಪ್-ಮೋಟಾರ್ ಅಳವಡಿಸಲಾಗುವುದು ಎಂದು ತಿಳಿಸಿದರು.

2. ನಾಗರಾಜ್ ಕಾಲೋನಿ ರಸ್ತೆಗಳ ಚರಂಡಿಗಳಲ್ಲಿನ ಹೂಳು ಮತ್ತು ಮಣ್ಣನ್ನು ತೆರವುಗೊಳಿಸುವುದು ಹಾಗೂ ಕವರಿಂಗ್ ಸ್ಲಾಬ್‌ಗಳನ್ನು ಅಳವಡಿಸುವುದರ ಬಗ್ಗೆ ಚರ್ಚೆ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಈ ಕೂಡಲೇ ಡಿಸಿಲ್ಟ್ ಮಾಡಲು ಹಾಗೂ ಕವರಿಂಗ್ ಸ್ಲಾಬ್‌ಗಳನ್ನು ಅಳವಡಿಸಲು ಗುತ್ತಿಗೆದಾರರಿಂದ ಮಾಡಿಸಲಾಗುವುದು ಎಂದು ತಿಳಿಸಿದರು.

3. ಇಮ್ಮಡಿಹಳ್ಳಿ ದ್ರೌಪದಮ್ಮ ದೇವಸ್ಥಾನದ ರಸ್ತೆಯಲ್ಲಿ ಕೊಳವೆ ಸಾಲುಗಳನ್ನು ಅಳವಡಿಸಲು ಕೋರಿ.
   - ➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಮುಂಬರುವ ಆಯ್ಯುವ್ಯಯ ಪಟ್ಟಿಯಲ್ಲಿ ಸದರಿ ಕಾಮಗಾರಿಯನ್ನು ಸೇರಿಸಲಾಗುವುದು ಎಂದು ತಿಳಿಸಿದರು.

Scanned with OKEN Scanner

4. ಕೈತೋಟ ಮತ್ತು ಇಮ್ಮಡಿಹಳ್ಳಿ ಸ್ಮಶಾನಗಳಲ್ಲಿ ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಸಿ, ಪಂಪ್-ಮೋಟಾರ್ ಅಳವಡಿಸಲು ಕೋರಿ.

➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಸಿ, ಪಂಪ್-ಮೋಟಾರ್ ಅಳವಡಿಸಲಾಗುವುದು ಎಂದು ತಿಳಿಸಿದರು.

5. ಇಮ್ಮಡಿಹಳ್ಳಿ ಎಲ್ಲಾ ರಸ್ತೆ ಬದಿಯ ಚರಂಡಿಗಳಲ್ಲಿ ಹೂಳು ಮತ್ತು ಮಣ್ಣನ್ನು ತೆರವುಗೊಳಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ವಾರ್ಡ್ ಅಭಿಯಂತರರು, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

6. ಗಾಂಧೀಪುರ ಗ್ರಾಮದ 02 ಕೊಳವೆ ಬಾವಿಗಳಿಗೆ ಪಂಪ್-ಮೋಟಾರ್ ಸೆಟ್ ಹಾಗೂ ಪ್ಯಾನಲ್ ಬೋಡ್‌ಗಳನ್ನು ಅಳವಡಿಸುವುದು.

➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ, ಪಂಪ್-ಮೋಟಾರ್ ಸೆಟ್‌ಗಳನ್ನು ಹಾಗೂ ಪ್ಯಾನಲ್ ಬೋಡ್‌ಗಳನ್ನು ಅಳವಡಿಸಲಾಗುವುದು ಎಂದು ತಿಳಿಸಿದರು.

7. ನಾಗೊಂಡನಹಳ್ಳಿ ಗ್ರಾಮಕ್ಕೆ ಪೈಪ್ ಲೈನ್, ಪ್ಯಾನೇಲ್ ಬೋಡ್ ಮತ್ತು ಪಂಪ್-ಮೋಟಾರ್ ಅಳವಡಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ ಮಾಡಿಸಲಾಗುವುದು ಎಂದು ತಿಳಿಸಿದರು.

8. ಹೋಪ್ ಫಾರಂ ವೃತ್ತದಿಂದ ವರ್ತೂರು ಕೋಡಿ ವರೆಗಿನ ರಸ್ತೆ ಬದಿ ಪಾದಚಾರಿ ಮಾರ್ಗದಲ್ಲಿ ಸಂಚರಿಸುವವರಿಗೆ ತೊಂದರೆಯಾಗಿರುವ ಮರಗಳ ಕೊಂಬೆಗಳನ್ನು ಕತ್ತರಿಸಲು ಕೋರಿ.

➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು, ರವರು ಅರಣ್ಯಾಧಿಕಾರಿಗಳಿಗೆ ತಿಳಿಸಿ, ಸೂಕ್ತ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

**ಆ) ರಸ್ತೆ ಮೂಲಭೂತ ಸೌಕರ್ಯ ವಿಭಾಗ - ಮಟ್ಟದ ಸಮಸ್ಯೆಗಳ ಚರ್ಚೆ.**

1. ಚನ್ನಸಂದ್ರದಿಂದ ಇಮ್ಮಡಿಹಳ್ಳಿ ಮುಖ್ಯರಸ್ತೆಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ.

➢ ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು (ಮೇಜರ್ ರೋಡ್ಸ್) ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಇ) ಬೃಹತ್ ನೀರುಗಾಲುವೆ ಇಲಾಖೆ - ಮಟ್ಟದ ಸಮಸ್ಯೆಗಳ ಚರ್ಚೆ.**

1. ನಾಗೊಂಡನಹಳ್ಳಿ ಶಿವಕುಂಟಮ್ಮ ದೇವಸ್ಥಾನದಿಂದ ಚನ್ನಸಂದ್ರ ರಾಜಕಾಲುವೆ ವರೆಗೆ ಸಂಪರ್ಕ ಕಲ್ಪಿಸುವ ಬಗ್ಗೆ.

➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

2. ದಕ್ಷಿಣ ಪಿನಾಕಿನಿ ನದಿಯ ರಾಜಕಾಲುವೆಯನ್ನು ಡಿಸಿಲ್ಟ್ ಮಾಡುವ ಬಗ್ಗೆ.

➢ ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು, ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

Scanned with OKEN Scanner

3. ಪ್ರೆಸ್ಟೀಜ್ ಓಜೋನ್ ಹಿಂಭಾಗದ ರಾಜಕಾಲುವೆಯನ್ನು ಡಿಸಿಲ್ಟ್ ಕಾಮಗಾರಿಯನ್ನು ಸರಿಯಾಗಿ ಕಾರ್ಯನಿರ್ವಹಿಸದಿರುವ ಬಗ್ಗೆ.

- ಸದರಿ ವಿಷಯಕ್ಕೆ ನೊಡಲ್ ಅಧಿಕಾರಿಗಳು, ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ**
**ಸಹಾಯಕ ಅಭಿಯಂತರರು**
**ವಾರ್ಡ್ ನಂ: 111**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಡಿ.ಹೆಚ್.ಓ ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಸೂಕ್ತ ಮಾಹಿತಿ/ಕ್ರಮಕ್ಕಾಗಿ ಸಲ್ಲಿಸಿದೆ.
4. ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಕ್ರಮಕ್ಕಾಗಿ.
5. ಎಲ್ಲಾ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.

Scanned with OKEN Scanner